## ಅಧ್ಯಾಯ - 5

# ಕಾಡುಗೊಲ್ಲರ ಕಾವ್ಯಗಳಲ್ಲಿ ಆಂತರಿಕ ಸಂಘರ್ಷ

5.1 ಒಳಬೆಡಗುಗಳ ನಡುವಿನ ಸಂಘರ್ಷ

5.2 ಕೌಟುಂಬಿಕ ಸಂಘರ್ಷ

5.3 ಪ್ರಾಣಿಗಳೊಂದಿಗೆ ಹೋರಾಟ

# ಅಧ್ಯಾಯ–5

# ಕಾಡುಗೊಲ್ಲರ ಕಾವ್ಯಗಳಲ್ಲಿ ಆಂತರಿಕ ಸಂಘರ್ಷ

ಆಂತರಿಕ ಸಂಘರ್ಷವು 'ಬೀಜದೊಳಗಣ ವೃಕ್ಷದಂತೆ ಶಿಲೆಯೊಳಗಣ ಪಾವಕದಂತೆ, ಶಬ್ಧದೊಳಗಿನ ನಿಶ್ಯಬ್ಧದಂತೆ' ಎಂಬ ಅಲ್ಲಮ ಪ್ರಭುವಿನ ಮಾತನ್ನು ಈ ಹಿಂದಿನ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ. ಇದರ ಮುಂದುವರಿಕೆಯಾಗಿ ಹೇಳುವುದಾದರೆ, ಸೃಷ್ಟಿ ಸೃಜನೆಯ ಸಂಜೀವಿನಿಯಾಗಿ ಕಾರ್ಯನಿರ್ವಹಿಸುತ್ತಿದ್ದರೂ ಇದು ಪ್ರಕೃತಿಗೆ ಅನ್ವಯಿಸುವ ಸಹಜ ಸಂಘರ್ಷವಾಗಿರುತ್ತದೆ. ಆದರೆ ವ್ಯಕ್ತಿ, ಸಮಾಜವನ್ನು ಗಮನದಲ್ಲಿಟ್ಟುಕೊಂಡಾಗ ಆಂತರಿಕ ಸಂಘರ್ಷದ ಅರ್ಥಗ್ರಹಿಕೆಗಳೇ ಭಿನ್ನವಾಗುತ್ತವೆ. ವ್ಯಕ್ತಿಯ ಅಂತರಂಗ ಮತ್ತು ಬಹಿರಂಗಗಳ ದ್ವಂದ್ವ, ಅವುಗಳ ನಡುವೆ ಏರ್ಪಡುವ ಬಿರುಕು, ಆ ಕಾರಣದಿಂದ ಏರ್ಪಡುವ ಸಂಘರ್ಷಗಳು ಇಲ್ಲಿ ಮುಖ್ಯವಾಗುತ್ತವೆ. ಸಾಮಾಜಿಕ ಮೌಲ್ಯಗಳು, ಅಧಿಕಾರ ಹಾಗೂ ವಿರಳವಾಗಿರುವ ಸಂಪನ್ಮೂಲಗಳ ಸ್ವಾಧೀನಕ್ಕಾಗಿ ಮಾಡುವ ಹೋರಾಟವಾಗಿರುತ್ತದೆ. ಇದರಲ್ಲಿ ಹೋರಾಡುವ ಪ್ರತೀಶಕ್ತಿಯೂ ತಮ್ಮ ವಿರೋಧಿಗಳನ್ನು ಶಕ್ತಿಹೀನರನ್ನಾಗಿಸುವುದು, ಘಾಸಿಗೊಳಿಸುವುದು ಮತ್ತು ಅವರ ಹುಟ್ಟಡಗಿಸುವುದು ನಿರಂತರ ವಾಗಿರುತ್ತದೆ.

## 5.1 ಒಳಬೆಡಗುಗಳ ನಡುವಿನ ಸಂಘರ್ಷ

ಸಮಾಜದ ಸಾಂಸ್ಕೃತಿಕ ನೆಲೆಗಟ್ಟಿನ ಸಂಘರ್ಷಕ್ಕೆ ಕುಂಟುಬ ಮೂಲ ಘಟಕವಾಗಿರುತ್ತದೆ. ಕುಟುಂಬ ಕುಂಟುಬ ದೊಳಗಿನ ಬಾಂಧವ್ಯದ ಒಳಬೆಡಗುಗಳೂ ಪ್ರಧಾನ ಪಾತ್ರವಹಿಸುತ್ತವೆ. ವ್ಯಕ್ತಿ ಬಾಹ್ಯ ಜಗತ್ತಿನಲ್ಲಿ ಎಷ್ಟೇ ಸಶಕ್ತವಂತನಾಗಿದ್ದರೂ ಅವನ ಒಳಬಾಂಧವ್ಯದ ಎಡರುತೊಡರುಗಳನ್ನು ನಿಭಾಯಿಸುವಲ್ಲಿ ಹೈರಾಣನಾಗುತ್ತಾನೆ. ಜುಂಜಪ್ಪನ ಕಾವ್ಯದಲ್ಲಿ ಎರಡು ಬೆಡಗುಗಳ ನಡುವಿನ ಕಲಹ– ವೈಷಮ್ಯಗಳು ಕಣ್ಣಿಗೆ ರಾಚುವಂತೆ ಗೋಚರಿಸುತ್ತವೆ.

ಕಾಡುಗೊಲ್ಲರಲ್ಲಿ **'ಮಾರನೋರು'** ಮತ್ತು **'ಕಂಬೇರು'** ಎಂಬ ಎರಡು ಬೆಡಗುಗಳು ಮುಖ್ಯ ನೆಲೆಯಲ್ಲಿ ಇವೆ. ಜುಂಜಪ್ಪ ಮಾರ್‍ನೋರು ಬೆಡಗಿಗೆ ಸೇರಿದವನು. ಜುಂಜಪ್ಪನ ಸೋದರಮಾವ ದೊಡ್ಡಸಿನ್ನೇಗೌಡ ಕಂಬೇರ ಬೆಡಗಿನವನು. ಈ ಇಬ್ಬರ ನಡುವಿನ ದ್ವೇಷ, ಅಸೂಯೆ, ಕಲಹ, ಕಾದಾಟಗಳು ಪ್ರಸ್ತುತ ಕಾವ್ಯದುದ್ದಕ್ಕೂ ಕಂಡುಬರುತ್ತವೆ. ಇದರ ಮುಂದುವರಿದ ಫಲವಾಗಿ ಎರಡೂ ಬೆಡಗುಗಳ ನಡುವಿನ ಸೈದ್ಧಾಂತಿಕ ಸಂಘರ್ಷವಾಗಿ ಜನಮಾನಸದಲ್ಲಿ ಶಾಶ್ವತವಾಗಿ ನೆಲೆಯೂರುತ್ತದೆ. ಕಂಬೇರು ಮತ್ತು ಮಾರನೋರ ಬೆಡಗಿನ ಎರಡು ಕುಟುಂಬಗಳನ್ನು ರೇಖಾಚಿತ್ರದಲ್ಲಿ ಹೀಗೆ ನೋಡಬಹುದು.

## ಮಾರನೋರ ಬೆಡಗಿನ (ಜುಂಜಪ್ಪನ ತಾತಂದಿರು) ಕುಟುಂಬ




ಕಂಬೇರಹಟ್ಟಿಯ ಯಜಮಾನ ದೊಡ್ಡ ಚಿನ್ನೇಗೌಡ. ಈತನಿಗೆ ಆರು ಜನ ತಮ್ಮಂದಿರು. ಒಬ್ಬಳು ತಂಗಿ ಚಿನ್ನಮ್ಮ. ದೊಡ್ಡ ಚಿನ್ನೇಗೌಡ ಆಗರ್ಭಶ್ರೀಮಂತ 'ದೊಡ್ಡ ಚಿನ್ನೇಗೌಡ ಬರ್ತಾನೆ ಸದ್ದು ಅಂದರೆ ಹಾರಿಹೋಗೋ ಹದ್ದು ನಿಲ್ಲೋದು'. ಈತನ ಮನೆಯಲ್ಲಿ ಬಂಗಾರದ ಹೊಗೆ ಹೊರಡುತ್ತಿತ್ತು. ಹಾಗಾಗಿ ಸಂಪತ್ತಿನ ಸೊಕ್ಕು ಹಾಗೂ ಊರಗೌಡಿಕೆಯ ಗತ್ತು ಎರಡೂ ಅವನಲ್ಲಿ ಮನೆಮಾಡಿಕೊಂಡಿದ್ದವು. ಇಂಥವನ ಮನೆಗೆ ಕಂಪಿಲೆ ಮಲೆಗೊಂಡನಿಗೆ ಹೆಣ್ಣು ಕೇಳಲು ಹೊನ್ನಟ್ಟಿ ಆಲೇಗೌಡ ಹಾಗೂ ಹಿರಿಯಟ್ಟಿ ದೊಡ್ಡಪ್ಪಗಳು

ಬರುತ್ತಾರೆ. ಹೆಣ್ಣು ಕೊಡಲು ಸುಲಭಕ್ಕೆ ಒಪ್ಪದ ದೊಡ್ಡಚಿನ್ನೇಗೌಡ ಪಗಡೆಪಂಥವನ್ನು ಒಡ್ಡುತ್ತಾನೆ. ಪಗಡೆಯಲ್ಲಿ ಚಿನ್ನೇಗೌಡ ಸೋಲುತ್ತಾನೆ. ಕರಾರು ಪ್ರಕಾರ ಹೆಣ್ಣು ಕೊಡಲು ನಿರ್ಧರಿಸುತ್ತಾನೆ. ಆದರೆ ಹಿರಿಯಟ್ಟಿ ಗೌಡರಿಗೆ ಮನಸು ಬದಲಾಗಿ ಮಲೆಗೊಂಡನಿಗಿಂತ ತಮ್ಮ ಮಕ್ಕಳಿಗೇ ಯಾರಾದರೊಬ್ಬರಿಗೆ ತಂದು ಕೊಳ್ಳಲು ನಿರ್ಧರಿಸುತ್ತಾರೆ. ತಮ್ಮ ಮಕ್ಕಳನ್ನೇ ಸಿಂಗರಿಸಿ ಹೆಣ್ಣಿನ ಮನೆಯಲ್ಲಿ ಕೂರಿಸುತ್ತಾರೆ. ಇವರಲ್ಲಿ ಯಾರಾದರೂ ಒಬ್ಬನನ್ನು ಚಿನ್ನಮ್ಮ ಆಯ್ದು ಕೊಳ್ಳಬೇಕಾಗಿತ್ತು. ಚಿನ್ನಮ್ಮ ಹಿರಿಯಟ್ಟಿಗೌಡರ ಸುಂದರ ಮಕ್ಕಳನ್ನು ಬಿಟ್ಟು ಮೂಲೆಯಲ್ಲಿ ಕುಂತಿದ್ದ ಕೊಳಕುರೂಪಿನ ಮಲೆಗೊಂಡನಿಗೆ ಪಾದತೊಳೆದು ಮುತ್ತಿನ ಮುಂಜೆರಗಾಸಿ ವಿಭೂತಿ ಅರಿಶಿನ ಕುಂಕುಮವಿಟ್ಟು ಮಾಲೆಹಾಕುತ್ತಾಳೆ. ಅಣ್ಣ ಚಿನ್ನೇಗೌಡನಿಗೆ ತಂಗಿಯ ಈ ವರ್ತನೆ ಅನಿರೀಕ್ಷಿತ ಆಘಾತ ಕೊಡುತ್ತದೆ. ಚಿನ್ನಮ್ಮ ಕೊಳಕ ಕನಿಷ್ಟದವನ್ನನ್ನು ಒಪ್ಪಿದಳೆಂದು ತಂಗಿಯ ಮೇಲೆ **'ಮನಮುನಿಸು'** ಮಾಡುತ್ತಾನೆ.

ತಂಗಿಯ ಮೇಲಿನ 'ಮನಮುನಿಸು' ಚಿನ್ನೇಗೌಡನ ಮನದೊಳಗೆ ದ್ವೇಷಭಾವದ ಮೊದಲ ಮೊಳಕೆಯಾಗುತ್ತದೆ. ಮುಂದಿನ ಹಂತದಲ್ಲಿ ಚಿನ್ನಮ್ಮಳಿಗೆ ಜುಂಜಪ್ಪ ಹುಟ್ಟಿ ನಂತರ ಮಾರಣ್ಣ, ಮೈಲಣ್ಣ ಹಾಗೂ ಮಾರಕ್ಕ ಎಂಬ ಮೂವರು ಮಕ್ಕಳು ಜನಿಸುತ್ತಾರೆ. ಅಲ್ಪ ಕಾಲದಲ್ಲೇ ತನ್ನ ಗಂಡನನ್ನು ಕಳೆದುಕೊಂಡು ಚಿನ್ನಮ್ಮ ಊರು ಬಿಟ್ಟು ಕಾಡಲ್ಲಿ ಮಕ್ಕಳೊಂದಿಗೆ ಬದುಕುಸವೆಸುತ್ತಾಳೆ. ಕಡುಬಡತನ ಬರುತ್ತದೆ. ಒಂದು ಹೊತ್ತಿನ ಅನ್ನಕ್ಕೂ ಪರಿತಪಿಸಬೇಕಾಗುತ್ತದೆ. ವಿಷಯ ತಿಳಿದ ಅಣ್ಣಂದಿರು ತಂಗಿಯನ್ನು ಮನೆಗೆ ಕರೆದು ಮಡಿಲಕ್ಕಿ ತುಂಬಿ ಏಳು ದನಗಳನ್ನು ಉಡುಗೊರೆಯಾಗಿ ಕೊಟ್ಟು ಕಳುಹಿಸುತ್ತಾರೆ. ಜುಂಜಪ್ಪನ ವಿಶೇಷ ಕಾಳಜಿ ಮತ್ತು ಮುತುವರ್ಜಿಯಿಂದ ಸೋದರ ಮಾವಂದಿರು ಕೊಟ್ಟಂತಹ ಏಳು ದನಗಳು **'ಏಳುಗೂಡಿನ'** ದನಗಳಾಗಿ ಹೆಚ್ಚಿಕೊಳ್ಳುತ್ತವೆ. ತನ್ನ ಏಳು ಗೂಡಿನ ದನಗಳ ನಿಭಾವಣೆಗಾಗಿ ಸಿಕ್ಕ ಸಿಕ್ಕ ಹುಲ್ಲುಗಾವಲುಗಳನ್ನು ಜುಂಜಪ್ಪ ಆವರಿಸಿಕೊಳ್ಳುತ್ತಾನೆ. ಎಲ್ಲಿನೋಡಿದರೂ ಜುಂಜಪ್ಪನ ದನಗಳೇ! ಸೋದರ ಮಾವಂದಿರು, ತಮ್ಮ ದನಗಳಿಗೆ ಹುಲ್ಲು ಮೇಯಿಸೋಕೆ ಹುಲ್ಲು ಇಲ್ಲದಂತಾಯಿತು. ನೀರು ಕುಡಿಸೋಕೆ ನೀರು ಇಲ್ಲದಂತಾಯಿತು. ಯಾವುದಕ್ಕೂ ಜುಂಜಪ್ಪ ಮೊದಲು, ಸೋದರ ಮಾವಂದಿರು ಆ ಮೇಲೆ ಎಂಬಂತಾಯಿತು.

**ಜುಂಜಪ್ಪನ ಮುಂದ್ಲದನ ಹುಲ್ಲುತಿಂದರೆ**
**ಹಿಂದ್ಲ ನಮ್ಮ ದನ ಸಗಣಿ ತಿನಬೇಕು**
**ಮುಂದ್ಲ ದನ ಹೊಂಡು ಕುಡೀಬೇಕು**
**ಹಿಂದ್ಲ ದನ ಗಂಜು ಕುಡೀಬೇಕು**
**ಅವುನ ಆವುಳಿಯೊಳಗೆ ನಮಗೆ**
**ಹುಲ್ಲು ನೀರು ಇಲ್ಲದಂಗಾಯ್ತು**

**(ಚಲುವರಾಜು-ಜುಂ-256)**

ಎಂಬ ಪರಿತಾಪ ಮಾವಂದಿರಿಗೆ ಆರಂಭವಾಯ್ತು. ಇದರೊಂದಿಗೆ ಜುಂಜಪ್ಪನ ದನಗಳ ಬಗ್ಗೆ ಜನಗಳ ಹೊಗಳಿಕೆಬೇರೆ!

**ಎತ್ತುಗಳು ನೋಡಿದರೆ ಮುತ್ತುಗಳಾಗೈದಾವೆ**
**ಕರುಗಳ ನೋಡಿದರೆ ಕರಿಮಣಿಯಾಗೈದಾವೆ**
**ಆಕಳ ನೊಡೇ ನನ್ನಕ್ಕ ಗೋಪುರಾಗೈದಾವೆ**
**ಎಂಥ ಚಲುವ ಕಾದಾನಮ್ಮ ದೇವಗಂಪಳದೆತ್ತುಗಳಾ**

**(ಮೀ.ಶಿ-ಕಾಬುವೀ-362)**

ಜುಂಜಪ್ಪನ ದನಗಳ ಬಗ್ಗೆ ಜನರಾಡುವ ಮಾತುಗಳನ್ನು ಕೇಳಿಸಿಕೊಂಡ ಮಾವಂದಿರಿಗೆ ಗಾಯದ ಮೇಲೆ ಬರೆ ಎಳೆದಂತಾಯಿತು. ಇದೇ ಹೊತ್ತಿನಲ್ಲಿ ಮಾವಂದಿರ ಎತ್ತುಗಳೂ ಸಹ ಸರಿಯಾಗಿ ಹುಲ್ಲು ನೀರು ಸಿಗದೆ 'ರೊಂಡಿ ಮುರುಕ' ಆದವು. ಇದಕ್ಕೆ ಕಾರಣ ಜುಂಜಪ್ಪ ಮಾಟ ಮಾಡಿಸಿದ್ದಾನೆಂಬ ಮತ್ತೊಂದು ಸಂಶಯದ ಭೂತ ಇವರ ಮನದೊಳಗೆ ಮನೆಮಾಡುತ್ತದೆ. ಇಷ್ಟು ಕಾರ್ಯಕಾರಣಗಳು ಸಾಕಾಗಿತ್ತು ಜುಂಜಪ್ಪನ ಮೇಲೆ ದ್ವೇಷ ಕಾರಲು. ತಂಗಿಯ ಮದುವೆಯ ಸಂದರ್ಭದಲ್ಲಿ ತಂಗಿ ಬಗೆಗೆ ಉಂಟಾದ ಆರಂಭಿಕ 'ಮನಮುನಿಸು' ಜುಂಜಪ್ಪನ ಕಾಲಾವಳಿಯಲ್ಲಿ ಪ್ರತೀ ಹಂತ ಹಂತವಾಗಿ ಚಿಗುರೊಡೆದು ಹೆಮ್ಮರವಾಗುತ್ತಾ ಬಂದಿತ್ತು. **'ನಮ್ಮ ಉಪ್ಪು ತಿಂದೋರು ಸೊಪ್ಪು ತಿಂದೋರು ನಮಗೆ ಗಂಡರಾದರು. ಏನಾದರೂ ಮಾಡಿ ಇವರ ಪರಾಕ್ರಮ ಅಡಗಿಸಬೇಕು'** ಎಂಬ ನಿರ್ಧಾರಕ್ಕೆ ಬರುತ್ತಾರೆ.

"ಮನುಷ್ಯನ ಬಯಕೆಗಳೇ ಉತ್ಪಾದನೆಯ ಮುಖ್ಯ ಪ್ರೇರಕಗಳು ಬಯಕೆಗಳನ್ನು ತಣಿಸುವ ಕ್ರಿಯೆಯೇ **'ಅನುಭೋಗ'** ವ್ಯಕ್ತಿ ಅನುಭೋಗಿಸುವಾಗ ಮತ್ತು ಅದರ ನಂತರ ಹೊಂದುವ ಅನುಭವವೇ **ತುಷ್ಟೀಗುಣ.** ಉತ್ಪಾದನೆ ಮತ್ತು ಅನುಭೋಗಗಳು ಚಿಗುರೊಡೆಯುವ ಬಯಕೆಗಳನ್ನು ಆಧರಿಸುತ್ತದೆ" **(ಜಿ. ಎನ್. ಮಲ್ಲಿಕಾರ್ಜುನ್-ಬೆಳಗಿನ ಬೆರಗು - ಪು : 21)** ಜುಂಜಪ್ಪನಲ್ಲಿ ಉತ್ಪಾದನೆ, ಅನುಭೋಗ ಮತ್ತು ತುಷ್ಟೀಗುಣ ಎಂಬ ಆರ್ಥಿಕ ಪರಿಭಾವನೆಗಳು ಗುಣಾತ್ಮಕವಾಗಿಯೇ ಕಾರ್ಯ ನಿರ್ವಹಿಸುತ್ತವೆ. ಆದರೆ ಸೋದರ ಮಾವಂದಿರಲ್ಲಿ ಇವು ವ್ಯತಿರಿಕ್ತವಾಗುತ್ತವೆ. ಋಣಾತ್ಮಕವಾಗಿ ವಿಘಟನೆಗಳು ಆವರಿಸಿಕೊಳ್ಳುತ್ತವೆ. ತತ್ಪರಿಣಾಮವಾಗಿ ಜುಂಜಪ್ಪನ ಉತ್ಪಾದನಾ ವ್ಯವಸ್ಥೆಯನ್ನು ಬುಡಮೇಲು ಮಾಡಲು ಮಾವಂದಿರು ಹಂತಹಂತವಾಗಿ ಕೇಡಿನ ಕಾರ್ಯಗಳಿಗೆ ತೊಡಗುತ್ತಾರೆ. ಇದಕ್ಕೆ ಪೂರಕವಾಗಿ ಜುಂಜಪ್ಪನ ಕಡೆಯಿಂದಲೂ ಪ್ರಚೋದನಾತ್ಮಕ **'ಬಾಹ್ಯಾವರಣ'** ಸನ್ನಿವೇಶಗಳೂ ಸೃಷ್ಟಿಯಾಗುತ್ತಿರುತ್ತವೆ. ಇಲ್ಲೆಲ್ಲಾ ಸೋದರಮಾವಂದಿರು ಸೊಲುಣ್ಣುತ್ತಲೇ ಬರುತ್ತಾರೆ. ಈ ಸೋಲು, ಅವಮಾನಗಳೇ ಮಾವಂದಿರ **ವರ್ತನಾವಿಕೃತಿಗಳಿಗೆ** ಪ್ರೇರಕವಾಗುತ್ತವೆ.

ಸೋದರ ಮಾವಂದಿರ **'ವರ್ತನಾವಿಕೃತಿ'** ಗಳು ಈ ತೆರನಾಗಿ ಮುಂದುವರಿಯುತ್ತವೆ –

1. ಜುಂಜಪ್ಪನ ದನಗಳು ನೀರುಕುಡಿಯುತ್ತಿದ್ದ ಹುಲಿಕುಂಟೆ ಕೆರೆಗೆ ಮದ್ದಿಡಿಸುವುದು.
2. ಸಾಣಿಕೆರೆ ಪುಟ್ಟಣ್ಣನಿಂದ 'ಪಂಪು' ಹೊಡೆಸುವುದು
3. ಬಡಮೈಲನನ್ನು ಬಂಧಿಸಿಡುವಂತೆ ಚೇಳೂರು ದೊರೆಗಳನ್ನು ಉತ್ತೇಜಿಸುವುದು.
4. ತಾಳೇದ ದುರುಗಿಯನ್ನು ಜುಂಜಪ್ಪನ ವಿರುದ್ಧ ಪ್ರಚೋದಿಸುವುದು.
5. ಜೂಜಿನ ಪಂಥಕ್ಕೆ ಜುಂಜಪ್ಪನನ್ನು ಆಹ್ವಾನಿಸುವುದು.
6. ಜುಂಜಪ್ಪನಿಗೆ ವಿಷಮದ್ದು ಇಡುವುದು.

ಹುಲಿಕುಂಟೆ ತಮ್ಮಣ್ಣನಿಂದ ಮಾಟದ ಮದ್ದು ಮಾಡಿಸಿ ಪರುಷವ್ವನ ಕೆರೆಯಲ್ಲಿ ತನ್ನ ಬಡಕರುವೊಂದನ್ನು ಹೂಳಿಸಿ **'ಇಸ'** ತೊಳೆಸಿದ್ದರ ಪರಿಣಾಮ ಜುಂಜಪ್ಪನಿಗೆ ಒಂದು ರೀತಿಯಲ್ಲಿ ಗುಣಾತ್ಮಕ ಸನ್ನಿವೇಶವೇ ಒದಗಿ ಬರುತ್ತದೆ. ಕೆಸರಲ್ಲಿ ಹೂತಿದ್ದ ಬಡಕರು ಜುಂಜಪ್ಪನ ಕೈಸೇರಿ **'ಬೀಜದ ಹೋರಿ'**ಯಾಗಿ **'ಬಡಮೈಲ'**ನೆಂದು ನಾಮಾಂಕಿತ ಗೊಳ್ಳುತ್ತದೆ. 'ಮೂಗಿನಲಿ ಮುಕ್ಕಣ್ಣನಾಗಿ ನಾಲೀಗೇಲಿ ನಾಗೇಂದ್ರನಾಗಿ ಭೂಮಿಗೂ ಆಕಾಶಕ್ಕೂ ಬೆಳೆದು ನಿಂತಿತು. ತಾನು ಹುಟ್ಟಿದ ತವರು ಹಾಗೂ ಮಾವಂದಿರಿಗೆ ಮುಂದಿನ ಎಲ್ಲಾಕಾಲಕ್ಕೂ ಬರಸಿಡಿಲಾಗಿ ಎರಗತೊಡಗಿತು.

ಇಡೀ ನಾಡಿಗೇ 'ಗೊಟ್ಟುಕಾಲ' (ಬರಗಾಲ) ಬಂದಾಗ ಸಾಣೀಕೆರೆಪುಟ್ಟಣ್ಣನ ಕಾವಲು ಮಾತ್ರ ನಳನಳಿಸುತ್ತಿರುತ್ತದೆ. ಅಲ್ಲಿಗೆ ಅನುಮತಿ ಇಲ್ಲದೇ 'ನರಪಿಳ್ಳೆ'ಯೂ ತಲೆಹಾಕದಂತಹ 'ಕಟ್ಟುಕಾವಲು' ಇರುತ್ತದೆ. ಇದರೊಂದಿಗೆ ಪುಟ್ಟಣ್ಣನೂ ಸಹ ಅಸಾಮಾನ್ಯ ಮಾಂತ್ರಿಕ. ಇಂಥವನ ಕಾವಲಿನಲ್ಲಿ ಸೋದರ ಮಾವಂದಿರು ತಮ್ಮ ದನಗಳನ್ನು ಮೇಯಿಸಲು 'ಹುಲ್ಲುಬನಿ' ಅನುಮತಿ ಪಡೆದು ದನಗಳನ್ನು ಕಾವಲಿಗೆ ಹೊಡೆತಂದರು. ಇವರು ಬರುವ ವೇಳೆಗೆ ಜುಂಜಪ್ಪನ ದನಗಳು ಕಾವಲನ್ನು ಅನುಮತಿ ಇಲ್ಲದೇ ಸಾಗರೋಪಾದಿಯಾಗಿ ಆವರಿಸಿ ಕೊಂಡು ಬಿಟ್ಟಿವೆ. ಇಂಥ ಹೊತ್ತಿನಲ್ಲಿ ಮಾವಂದಿರಿಗೆ ಹೊಟ್ಟೆಉರಿ ಮತ್ತಷ್ಟು ಹೆಚ್ಚಾಗುತ್ತದೆ. ವ್ಯವಹಾರ ನೀತಿಯಂತೆ ಹುಲ್ಲುಬನಿ ಕೊಡದೆ ಜುಂಜಪ್ಪನ ದನಗಳು ಕಾವಲೊಳಗೆ ನುಗ್ಗಿರುವುದನ್ನು ಮಾವಂದಿರು ಪ್ರಶ್ನಿಸುತ್ತಾರೆ. ಇವರನ್ನು ಸಮಾಧಾನ ಪಡಿಸುವುದಕ್ಕಾಗಿ ಮಾಂತ್ರಿಕ ಪುಟ್ಟಣ್ಣ ಜುಂಜಪ್ಪನ ದನಗಳಿಗೆ, ಜುಂಜಪ್ಪನಿಗೆ, ಮಂತ್ರವಿದ್ಯೆಯಿಂದ ಪವಾಡಗಳನ್ನು ಮಾಡುತ್ತಾನೆ. ಆದರೆ ಯಾವೂವೂ ಯಶಸ್ವಿಯಾಗುವುದಿಲ್ಲ. ತನ್ನ ಮಾಂತ್ರಿಕ ಹೋರಾಟದಲ್ಲಿ ಪುಟ್ಟಣ್ಣ ಸೋಲುನ್ನನುಭವಿಸಿ ಸಾವನ್ನಪ್ಪುತ್ತಾನೆ.

ಮೂರನೇ ಹಂತದಲ್ಲಿ ಮಾವಂದಿರು ಚೇಳೂರು ದೊರೆ ರಂಗನನ್ನು ಜುಂಜಪ್ಪನ ವಿರುದ್ಧ ಎತ್ತಿಕಟ್ಟುತ್ತಾರೆ. ದೊರೆಯ ಕಾವಲಿನಲ್ಲಿರುವ ಜುಂಜಪ್ಪನ ದನಗಳನ್ನು ನೋಡಿದ ಮಾವಂದಿರು ದೊರೆಗಳಿಗೆ

'ಕಿವಿಕಚ್ಚಿ' ಜುಂಜಪ್ಪನ ಮೇಲೆ ಯುದ್ಧ ಮಾಡುವಂತೆ ಪ್ರೇರೇಪಿಸುತ್ತಾರೆ. ಯುದ್ಧದಲ್ಲಿ ದೊರೆರಂಗ ಮಣ್ಣುಮುಕ್ಕುತ್ತಾನೆ. ಇದರಿಂದ ಮತ್ತಷ್ಟು ಅವಮಾನಿತರಾದ ಮಾವಂದಿರು ಮುಗ್ಧ ಮಕ್ಕಳಾದ ಮಾರಣ್ಣ ಮೈಲಣ್ಣನವರನ್ನು ಸೆರೆಹಿಡಿದು ಕಟ್ಟಿಹಾಕಿ ಚಿತ್ರ ಹಿಂಸೆ ಕೊಡುತ್ತಾರೆ.

1. ಹುಣಸೇ ಬರಲನ್ನು ಬೆಂಕಿಯಲ್ಲಿ ಕಾಯಿಸಿ ರಕ್ತಬರುವಂತೆ ಹೊಡೆಯುತ್ತಾರೆ.
2. ಕೈಕಾಲು ಕಟ್ಟಿ ಕಾದ ಮರಳಿನ ಮೇಲೆ ಹೊರಳಿಸಿ ಮುಳ್ಳುಗಳಿಂದ ಚುಚ್ಚುತ್ತಾರೆ.
3. ಕಣ್ಣು ತುಂಬಾ ಮರಳು ತುಂಬುತ್ತಾರೆ.
4. ಕಾರೆಮುಳ್ಳಿನ ಮೇಲೆ ಮಲಗಿಸಿ ಕಾಲಿನಿಂದ ತುಳಿಯುತ್ತಾರೆ.

ಈ **'ವಿಕಲ್ಪಹಿಂಸೆ'**ಗಳು ಸೋದರ ಮಾವಂದಿರ ಹತಾಶ ಮನಸ್ಥಿತಿಯ ದ್ಯೋತಕವಾಗಿವೆ. ಇದೇ ಸಂದರ್ಭದಲ್ಲಿ ಮುಂದುವರಿದ ಪ್ರಯತ್ನವಾಗಿ ಬಡಮೈಲಹೋರಿಯನ್ನು ದೊರೆಗಳು ಸೆರೆಹಿಡಿಯುವಂತೆ ಮಾಡುತ್ತಾರೆ. ಇಲ್ಲಿಯೂ ಬಡಮೈಲನಿಂದ ಮುಖಭಂಗ ಅನುಭವಿಸುತ್ತಾರೆ. ನಂತರದ ಪ್ರಯತ್ನವಾಗಿ ದೊರೆಗಳು– ಜುಂಜಪ್ಪನಿಗೆ ಜೂಜುಪಂಥ ವನ್ನೇರ್ಪಡಿಸುತ್ತಾರೆ. ಇಲ್ಲಿಯೂ ಸೋಲುಣ್ಣುತ್ತಾರೆ.

ಹೀಗೆ ಹತ್ತಾರು ಕೆಡುಕುಗಳನ್ನು ಕೈಗೊಂಡ ಸೋದರ ಮಾವಂದಿರು ತಾವೇ ಅವಮಾನಿತರಾಗ ತೊಡಗಿದರು. ಅಲ್ಲದೆ ಇಲ್ಲೆಲ್ಲಾ ಬೇರೊಬ್ಬ ಬಲಿಷ್ಠನನ್ನು ಮುಂದೆ ಬಿಟ್ಟು, ತಾವುಗಳು ಮಾತ್ರ ಹಿಂದೆ ನಿಂತು ತಂತ್ರಗಳನ್ನು ರೂಪಿಸುತ್ತಿದ್ದರು. ಪ್ರತೀ ತಂತ್ರಗಳೂ ತಮಗೇ ಉರುಳಾಗುತ್ತಿದ್ದವು. ಹಾಗಾಗಿ ಮಾವಂದಿರು ಜುಂಜಪ್ಪನೊಂದಿಗೆ ನೇರವಾಗಿ ಹಣಾಹಣಿಗೆ ಇಳಿಯತೊಡಗುತ್ತಾರೆ. ಇವರ ನೇರ ಹಣಾಹಣಿಗೆ **'ಜೂಜಿನಮರ'** ಸಾಕ್ಷಿಯಾಗುತ್ತದೆ. ಜುಂಜಪ್ಪನ ದನಗಳು ಜೂಜಿನ ಮರವನ್ನು ಹಾರಿ ಜಯತಂದು ಕೊಡುತ್ತವೆ. ಆಗ ಜುಂಜಪ್ಪ ನೇರವಾಗಿ ಸೋದರ ಮಾವಂದಿರ ಮೇಲೆ ಮೊದಲ ಬಾರಿಗೆ ಎರಗುತ್ತಾನೆ. ಸೋತ ಮಾವಂದಿರಿಗೆ ಕ್ಷೌರಿಕನಿಂದ ಮೂರು ಪಟ್ಟೆ ತಲೆ ಬೋಳಿಸುತ್ತಾನೆ. ಬಳೆಗಾರರನ್ನು ಕರೆಸಿ ಬಳೆ ತೊಡಿಸುತ್ತಾನೆ. ಅಗಸರ ಕಡೆಯಿಂದ ಸೀರೆಉಡಿಸಿ ಮೆರವಣಿಗೆ ಮಾಡುತ್ತಾನೆ. ಈವರೆಗಿನ ಎಲ್ಲಾ ಕೇಡು ಪ್ರಸಂಗಳಲ್ಲಿ ಜುಂಜಪ್ಪ ಕೇಡುಮಾಡಲಿಕ್ಕೆ ಬಂದವರನ್ನೇ ಶಿಕ್ಷಿಸಿ, ಕಾರಣರಾಗುತ್ತಿದ್ದ ಮಾವಂದಿರನ್ನು ಮಾತ್ರ ಕ್ಷಣಮಾತ್ರಕ್ಕೂ ಎಡತಾಕುತ್ತಿರಲಿಲ್ಲ. ಜೂಜಿನ ಮರ ಪ್ರಸಂಗದಲ್ಲಿ ಮಾತ್ರ ಮಾವಂದಿರು ನೇರ ಪ್ರತಿಸ್ಪರ್ಧಿಗಳಾಗಿದ್ದರು. ಹಾಗಾಗಿ ಅವರಿಗೆ ಅವಮಾನಪೂರಿತ ಮೆರವಣಿಗೆ ಮಾಡುತ್ತಾನೆ. ಇದು ಜುಂಜಪ್ಪನ ನ್ಯಾಯೋಚಿತ ಔಚಿತ್ಯ ಪ್ರಜ್ಞೆಯನ್ನು ಸಾಕ್ಷೀಕರಿಸುತ್ತದೆ.

ಜುಂಜಪ್ಪನಿಗೆ ಕೇಡು ಮಾಡಲು ಹೋಗಿ ಪ್ರತ್ಯಕ್ಷವಾಗಿ ಪರೋಕ್ಷವಾಗಿ ನಿರಂತರವಾಗಿ ಅವಮಾನಕ್ಕೆ ಒಳಗಾಗುತ್ತಿದ್ದ ಮಾವಂದಿರು ಜೂಜಿನ ಮರದ ಪ್ರಸಂಗದಿಂದ ಅವರ ಎದೆಯಲ್ಲಿ ಪ್ರತೀಕಾರದ ಜ್ವಾಲೆ ಭುಗಿಲೆದ್ದು ಉರಿಯತೊಡಗಿತು. ಜುಂಜಪ್ಪನನ್ನು ಕೊಲ್ಲದಿದ್ದರೆ ತಾವು ಬದುಕುವುದೇ ದುಸ್ತರವೆಂಬ ಭಾವನೆ ಸ್ಥಿರಗೊಂಡಿತು. ವಿಷಹಾಕಿ ಕೊಲ್ಲುವುದೇ ಸರಿಯಾದ ಮಾರ್ಗವೆಂದು ನಿರ್ಧರಿಸಿದರು. ಗೂಡಿನ ಹಬ್ಬದ

ಹುತ್ತದ ಪೂಜೆಗಾಗಿ ವಿಶೇಷ ಆಹ್ವಾನಿತರಾಗಿ ಜುಂಜಪ್ಪ ಮತ್ತು ಸೋದರರು ಒಲ್ಲದ ಮನಸ್ಸಿನಿಂದ ಮಾವಂದಿರ ಮನೆಗೆ ಹೋದರು. ಊಟದ ಸಂದರ್ಭದಲ್ಲಿ ಮಾವಂದಿರ ಮೋಸದ **'ಉರಿಮದ್ದುಉಗ್ಗಿ'** ಯನ್ನು ಉಣ್ಣುವುದರೊಂದಿಗೆ ಜುಂಜಪ್ಪ ಮತ್ತು ಅವನ ಸೋದರರು ದಾರುಣವಾಗಿ ಸಾವನ್ನಪ್ಪುತ್ತಾರೆ. ಈ ಸಂದರ್ಭದಲ್ಲಿ ಮಾವಂದಿರ **'ವಿಘ್ನಸಂತೋಷಿವರ್ತನೆ'** ಪರಾಕಾಷ್ಠತೆಗೆ ತಲುಪಿ ಕೋಲುಹಾಕುತ್ತಾರೆ.

**ತಂಗಿ ಚಿನ್ನಮ್ಮಾಗೆ ಏಳುಕರ ಕೊಟ್ಟಿದ್ದೀವಿ ಕೋಲನ್ನಕೋಲೆ**<br>**ಏಳುಕರುವಿನಾಗೆ ಏಳುಗೂಡೇ ಬೆಳದಿತ್ತು ಕೋಲನ್ನಕೋಲೆ**<br>**ತಂಗಿಚಿನ್ನಮ್ಮ ನಿನ ಮಕ್ಕಳು ಸತ್ತರು ಕೋಲನ್ನಕೋಲೆ**<br>**ಅವರ ಮುತ್ತೀನ ಬೆಳಗಾವು ನಮ್ಮೀಗೆ ಆದಾವು**<br>**ತಾಯಿ ಸಿನ್ನಮ್ಮನ ಬಾಲಾರು ಸತ್ತಾರು ಕೋಲನ್ನಕೋಲೆ**<br>**ಅವರ ಮುತ್ತೀನ ಪಿಳಗೋವಿ ನಮ್ಮೀಗೆ ಆದಾವು**<br>**ತಂಗೀ ಚಿನ್ನಮ್ಮಾಗೆ ಹಿಂದಿಲ್ಲ ಮುಂದಿಲ್ಲ**<br>**ದನವಡಕಂಡು ನಮ್ಮನೀಗೆ ಬತ್ತಾಳೆ ಕೋಲನ್ನಕೋಲೆ**

**(ಮೀ.ಶಿ-ಕಾಬುವೀ-421)**

ಜುಂಜಪ್ಪನಿಗೆ ವಿಷಮದ್ದು ಇಡುವ ಪ್ರಸಂಗ ಇಡೀ ಕಾವ್ಯದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿತಗೊಂಡಿದೆ. ಕರುಣಾರಸದ ಬುಗ್ಗೆಯನ್ನು ಚಿಮ್ಮಿಸುತ್ತದೆ. ಜುಂಜಪ್ಪನ ಕಾವ್ಯದಲ್ಲಿ ಇದೊಂದು ರಸಖಂಡ.

ಜುಂಜಪ್ಪ, ಮರಣಾನಂತರ ಮತ್ತೆ ಏಳುದಿನಕ್ಕೆ ಮರುಹುಟ್ಟು ಪಡೆದು ಬಂದು ಸೋದರ ಮಾವ ಚಿನ್ನೇಗೌಡನ ಇಡೀ ಊರನ್ನೇ ಸುಟ್ಟು ಭಸ್ಮಮಾಡುತ್ತಾನೆ.

**ಹಾಲುಂಬತ್ತಿಗೆ ಹಾಳಾಯ್ತು ಕಂಬೇರಹಟ್ಟಿ**<br>**ಇಟ್ಟುಂಬತ್ತಿಗೆ ಸುಟ್ಟೋಯ್ತು ಕಂಬೇರಹಟ್ಟಿ**<br>**ಇಟ್ಟುಂಡು ಅರಸು ಎಲೆ ಮೇಲ್ಲೋವತ್ತಿಗೆ ಸುಟ್ಟಿತಣ್ಣಾ**

**(ಮೀ.ಶಿ-ಕಾಬುವೀ-422)**

ಕಂಬೇರಹಟ್ಟಿಯನ್ನು ಸುಟ್ಟುಹಾಕುವ ಜುಂಜಪ್ಪನ ಸಂಯಮರಹಿತ ವರ್ತನೆ ಆಕ್ಷೇಪಾರ್ಹ ವಾಗುತ್ತದೆ. ಇವರಿಗೆ ಕೇಡು ಬಗೆದವರು ಕಂಬೇರಹಟ್ಟಿಯ ಕುಂಬೇರ ಬೆಡಗಿನ **'ಪೋಶನೋರು'** ಎಂಬ ಉಪ ಬಣದ ದೊಡ್ಡ ಚಿನ್ನೇಗೌಡ ಮನೆತನವೇ ಹೊರತು ಕಂಬೇರಹಟ್ಟಿಯ ಅಮಾಯಕ ಜನವಲ್ಲ. ಮಕ್ಕಳುಮರಿಗಳು ಬಸ್ರಿಬಾಣಂತಿಯರು, ಮುದುಕರು, ಅಸಾಹಾಯಕರು, ಮೂಕಪ್ರಾಣಿಗಳು, ಪಕ್ಷಿಗಳು, ಈ ಯಾವುವೂ ಜುಂಜಪ್ಪನಿಗೆ ಯಾವತ್ತೂ ಕೇಡುಬಗೆದಿಲ್ಲ. ಅದರಲ್ಲಿಯೂ ಇಡೀ ಹಟ್ಟಿಯೇ ಸುಟ್ಟು ಕರಕಲಾಗುತ್ತಿರುವ ವೇಳೆಯಲ್ಲಿ ತಂಗಿ ಮಾರಕ್ಕಳಿಗೆ ಮಾತ್ರ ಅಗ್ನಿಕಾಂಡದಿಂದ ವಿನಾಯ್ತಿ ಕೊಟ್ಟು ಹೇಳುವ ಮಾತಿದು–

**ಕೊಂಬೆ ಕೊಂಬೆಗೆ ಹೆಚ್ಚಾಗಲಿ ರೆಂಬೆಗೆ ರೆಂಬೆ ಬೆಳೆಯಲಿ**<br>**ಕುಂಬಳ ಕುಡಿಯಿಕ್ಕಿದಂಗೆ ನಿಮ್ಮ ಸಂತಾನ ಹೆಚ್ಚಾಲಿ**<br>**ನನ್ನ ಮೊದಲ ಪೂಜೆ ನಿಮ್ಮಿಂದಾಗಲಿ**

**(ಮೀಶಿ-ಕಾಬುವೀ-423)**

ಜುಂಜಪ್ಪನ ಈ ನಿಲುವು ಸಂಘರ್ಷ ನಂತರದಲ್ಲಿ ಮಾರ್‍ನೋರು ಬೆಡಗು ಮತ್ತು ಕಂಬೇರ ಬೆಡಗುಗಳ ನಡುವಿನ **'ಅನುಸಂಧಾನ'** ವೆಂದು ಪರಿಭಾವಿಸಬಹುದು. ಆದರೂ ತನಗೆ ಘನಘೋರ ಕೇಡುಬಗೆದ ಚೇಳೂರು ರಂಗ, ಸಾಣೀಕೆರೆ ಪುಟ್ಟಣ್ಣ, ತಾಳೇದದುರುಗಿಯರ ಯುದ್ಧ ಪ್ರಸಂಗದಲ್ಲಿ ಊರಿನ ಜನಸಾಮಾನ್ಯರ ಮೇಲೆ ಅಗಾಧ ಪ್ರೀತಿ ತೋರಿಸಿ ಅವರಿಗೆ ಯಾವುದೇ ರೀತಿಯ ನೋವು-ಸಂಕಟಗಳನ್ನು ಜುಂಜಪ್ಪ ಕೊಟ್ಟವನಲ್ಲ. ಆದರೆ ಕಂಬೇರ ಹಟ್ಟಿಯ ವಿಚಾರದಲ್ಲಿ ಮಾತ್ರ ನಿರ್ದಯಿ ಮನಸ್ಕನಾಗುತ್ತಾನೆ. ಜುಂಜಪ್ಪನನ್ನು ಎಷ್ಟೇ ಗೌರವಭಕ್ತಿ ಭಾವದಿಂದ ಆರಾಧಿಸುತ್ತಿದ್ದರೂ ಸಮುದಾಯದ ಮನದ ಮೂಲೆಯಲ್ಲಿ ಜುಂಜಪ್ಪನ ಈ ಪ್ರತೀಕಾರವರ್ತನೆ ಬಗ್ಗೆ ಒಂದು ಸಣ್ಣ ಸಿಟ್ಟು ಬಂದಿರುವ ಸಾಧ್ಯತೆ ಇದೆ.

**ಸೋದರ ಮಾವುಗಳ ಸಾಲುಕಟ್ಟಿ ಕೊಂಧ್ಯಲೋ**
**ಕೇಡಾಳಿ ಕಾಣೋ ಮಗನೀರ-ಕಂಬ್ಳೋರು**
**ಜಾಣಾರಾವುಟ್ಟು ಉರಿದ್ಯಲ್ಲೋ ||**
**ಸಿಕ್ಕಮಾವುಗಳ ಸುತ್ತುಕಟ್ಟಿ ಕೊಂಧ್ಯಲ್ಲೋ**
**ಕೇಡಾಳಿ ಕಾಣೋ ಜುಂಜಪ್ಪ-ಕಂಬ್ಳೋರು**
**ಜಾಣಾರವುಟ್ಟು ಉರಿದ್ಯಲ್ಲೋ**

**(ಹನೂರು-ಜವೀ-161)**

ಈ ಎರಡು ತ್ರಿಪದಿಗಳು ಮೇಲಿನ ಮಾತುಗಳನ್ನು ಮತ್ತಷ್ಟು ಪುಷ್ಟೀಕರಿಸುತ್ತವೆ.

## 5.2 ಕೌಟುಂಬಿಕ ಸಂಘರ್ಷ

ಸಮಾಜ ವಿಜ್ಞಾನಿಗಳು ವಿಶ್ಲೇಷಿಸುವಂತೆ, ಕುಟುಂಬವೆಂಬುದು ಸಾಮಾಜಿಕ ಸಂಸ್ಥೆಗಳಲ್ಲಿ ಅತ್ಯಂತ ಮೂಲಭೂತ ಸ್ವರೂಪದ ಒಂದು ಪ್ರಾಥಮಿಕ ಘಟಕ. ಕುಟುಂಬವು ಪ್ರೀತಿ, ಪ್ರೇಮ, ವಾತ್ಸಲ್ಯ, ಕರುಣೆ ಮುಂತಾದ ಭಾವನಾತ್ಮಕ ನೆಲೆಯ ಮೇಲೆ ರಚಿತಗೊಂಡಿರುತ್ತದೆ. ಸಾಂಸ್ಥಿಕ ರೂಪದಲ್ಲಿ ಕಂಡುಬರುವ ಕುಟುಂಬವು ಶಾಶ್ವತ ಸ್ವರೂಪದ್ದಾಗಿರುತ್ತದೆ. ಸಾಮಾನ್ಯವಾಗಿ ಕುಂಟುಬಸದಸ್ಯರ ಕನಿಷ್ಟ ಆರ್ಥಿಕ ಅಗತ್ಯಗಳ ಪೂರೈಕೆಗೆ ಕುಟುಂಬದಲ್ಲಿ ಒಂದು ವ್ಯವಸ್ಥೆ ಇರುತ್ತದೆ. ಈ ವ್ಯವಸ್ಥೆ ಯಾವಾಗಲೂ ಸ್ಥಿರವಾಗಿರುವುದಿಲ್ಲ, ವ್ಯತ್ಯಯಗಳಿಗೆ ಒಳಗಾಗಿರುತ್ತದೆ. ಯಾವಾಗ ವ್ಯತ್ಯಯಗಳು ಉಂಟಾಗುತ್ತವೋ ಆಗ ಕುಟುಂಬದೊಳಗೆ ವಿಘಟನೆಗಳು ರೂಪುತಳೆಯುತ್ತವೆ. ಈ ವಿಘಟನೆಗಳೇ ಮುಂದೆ ಸಂಘರ್ಷಕ್ಕೆ ದಾರಿಯಾಗುತ್ತವೆ.

ಕಾಡುಗೊಲ್ಲರ ಕಾವ್ಯಗಳಲ್ಲಿ ಕಂಡುಬರುವ ಕುಟುಂಬಗಳು ಸಾಮಾನ್ಯವಾಗಿ ಕೂಡುಕುಟುಂಬಗಳು. ಸಾಮಾಜಿಕ ಸ್ಥರ ವಿನ್ಯಾಸದಲ್ಲಿ ಇವು ಅವಿಭಕ್ತ ಕುಟುಂಬಗಳು. ಆ ಕಾಲದ ಅವಿಭಕ್ತ ಕುಟುಂಬಗಳ ಗುಣಾತ್ಮಕ ಅಂಶಗಳು ಏನೇ ಇದ್ದರೂ ಆರ್ಥಿಕ ಉತ್ಪಾದನೆ ಹಿನ್ನೆಲೆಯ ವೃತ್ತಿಸಹಜ ಬಿಗುವುಗಳು, ಉದ್ವೇಗಗಳು ಮಡುಗಟ್ಟಿ ನಿಂತಿರುತ್ತಿದ್ದವು. ಸಂದರ್ಭಾನುಸಾರ ಅವು ಸ್ಫೋಟಗೊಳ್ಳುತ್ತಿದ್ದವು. ಇಂತಹ ಸನ್ನಿವೇಶಗಳು ಗೊಲ್ಲರ ಕಾವ್ಯಗಳಲ್ಲಿ ಅಲ್ಲಲ್ಲಿ ಕಂಡುಬರುತ್ತವೆ.

**'ದೇವರ ಮಾರಪ್ಪ'** ನ ಕಥನದ ಒಂದು ಸನ್ನಿವೇಶ ಹೀಗೆ ಬರುತ್ತದೆ-ದೊಡ್ಡತಿಪ್ಪರಾಯ-ಸಣ್ಣತಿಪ್ಪರಾಯ ಅಣ್ಣ ತಮ್ಮಂದಿರು. ಹಿರಿಯವ ಮುದುಕನಾದರೂ ಮಕ್ಕಳಾಗಲ್ಲಿಲ್ಲ. ಮುದಿವಯಸ್ಸಿನಲ್ಲಿ ಚಿತ್ರದೇವರ ಅನುಗ್ರಹದಿಂದ ಹಿರಿಯವನ ಹೆಂಡತಿ ದೊಡ್ಡಮಾರಕ್ಕಳಿಗೆ'ವಲೆ' ನಿಂತಿತು. ಮುದುಕಿಗೆ 'ವಲೆ' ನಿಂತದ್ದು ನೋಡಿ ಚಿಕ್ಕೋಳಿಗೆ ಹೊಟ್ಟೆಉರಿ ಬಂದಿತು. ಕರುಳು ಕೊರೆದು ಸಾಯಿಲಿ ಎಂದು ಹಸಿಹಿಟ್ಟಿಗೆ ಗೋರಿಕಲ್ಲು ಪುಡಿ ಮಾಡಿ ಬೆರಸಿ ಮುದ್ದೆ ಮಾಡಿ ಕೊಟ್ಟಳು. ಆದರೆ ದೊಡ್ಡಮಾರಕ್ಕಳಿಗೆ ಚಿತ್ರದೇವರ ಅನುಗ್ರಹದಿಂದ ತೊಂದರೆ ಏನೂ ಆಗಲಿಲ್ಲ. ಮುಂದೆ ಹುಟ್ಟಿದ ಮಗುವಿಗೆ ಜನಿಗೆ ಕಾರ್ಯಮುಗಿಸಿ 'ದೇವರಮಾರಪ್ಪ' ಎಂದು ಹೆಸರಿಟ್ಟರು. **'ಮಗು ಅಪ್ಪ ಅಂದಾಗ ಅಪ್ಪಸತ್ತ, ಅಮ್ಮ ಅಂದಾಗ ಅಮ್ಮ ಸತ್ತಳು'** ಮಗು ಚಿಕ್ಕಮ್ಮಳ ನೆರಳಲ್ಲಿ ಬೆಳೆಯ ತೊಡಗಿತು.

ದೇವರಮಾರಪ್ಪನಿಗೆ ಅವನ ಚಿಕ್ಕಪ್ಪ-ಚಿಕ್ಕಮ್ಮ ನಾನಾ ರೀತಿಯ ಕಿರುಕುಳ ಕೊಡಲಾರಂಬಿಸಿದರು. ಮಾರಪ್ಪ ತನ್ನ ಭಾಗದ ಆಸ್ತಿಯಲ್ಲಿ ಭಾಗ ಕೇಳುತ್ತಾನೆ. ಚಿಕ್ಕಮ್ಮ ನಿರಾಕರಿಸುತ್ತಾಳೆ. ಆದಾಗ್ಯೂ ಪಟ್ಟು ಬಿಡದ ಮಾರಪ್ಪ ಭಾಗ ತೆಗೆದು ಸಾಮಾನು ಹಂಚಿಕೆ ಮಾಡಿಸುತ್ತಾನೆ. ದೇವರ ಪೂಜಾರಿಕೆಗೆ ಸಂಬಂಧಿಸಿದಂತೆ ನಿತ್ಯಪೂಜೆ ಚಿಕ್ಕಪ್ಪನ ಮಕ್ಕಳಿಗೆ. ಹಬ್ಬಹರಿದಿನದ ಪೂಜೆ ಮಾರಪ್ಪನಿಗೆ ಎಂದು ನಿಗದಿಯಾಯಿತು. ದಿನಕಳಿದಂತೆ ಜನ ನಿತ್ಯ ಪೂಜಾರಿಕೆಯ ಚಿಕ್ಕಪ್ಪನ ಮಕ್ಕಳಿಗಿಂತ ಹಬ್ಬಹರಿದಿನದ ಪೂಜಾರಿಕೆಯ ಮಾರಪ್ಪನ ಕಾಲಿಗೆ ಹೆಚ್ಚು ನಮಸ್ಕರಿಸುತ್ತಿದ್ದರು. ಸೋದರರಿಗೆ ಅಸೂಯೆ ಆರಂಭವಾಯಿತು. ಇದು ಬೇರೆಬೇರೆ ರೂಪದ ತಿಕ್ಕಾಟಗಳಿಗೆ ಬೀಜವಾಗುತ್ತದೆ. ಮಾರಪ್ಪನ ಮಕ್ಕಳವರೆಗೂ ಮುಂದುವರಿಯುತ್ತದೆ. ಮನೆತನಗಳು ಮುರಿದು ಬೀಳುತ್ತವೆ.

ಕುಟುಂಬದ ಹಿರಿಯಣ್ಣ ದೊಡ್ಡತಿಪ್ಪರಾಯನಿಗೆ ಮಕ್ಕಳಾಗಿಲ್ಲವೆಂಬ ಹಿನ್ನೆಲೆಯಲ್ಲಿ ಸೋದರ ಸಣ್ಣತಿಪ್ಪರಾಯನಿಗೆ ಕುಟುಂಬದ ಆಸ್ತಿ ಎಲ್ಲವೂ ತನ್ನ ಪಾಲಾಗುತ್ತದೆ ಎಂಬ ಮಹಾದಾಸೆ ಮನೆ ಮಾಡಿತ್ತು. ಅದರೆ ತನ್ನಣ್ಣನಿಗೆ ಮಗುವಾಗುವುದ ರಿಂದ ತನ್ನ ಆಸ್ತಿಮೇಲಿನ ಕನಸಿನ ಅರಮನೆ ಕುಸಿದುಬಿತ್ತು. ದೇವರ ಪೂಜಾರಿಕೆಗೂ ಕುತ್ತುಬಿತ್ತು. ದೇವರ ಪೂಜಾರಿಕೆಯೂ ಒಂದು ಪ್ರತಿಷ್ಠೆಯ ವಿಷಯ. ಆರ್ಥಿಕ ಮೂಲದ ನೆಲೆಯೂ ಕೂಡ ಹೌದು. ಹಾಗಾಗಿ ಇವರಲ್ಲಿ ಕೌಟುಂಬಿಕ ಹಕ್ಕುದಾರಿಕೆಯಲ್ಲಿ ಹಲವು ರೀತಿಯ ಸೆಣೆಸಾಟುಗಳು ಇಲ್ಲಿ ಕಂಡುಬರುತ್ತವೆ.

ಮೂರು ತಲೆಮಾರುಗಳ ಜುಂಜಪ್ಪ ಕಾವ್ಯದಲ್ಲಿ ಕುಟುಂಬ ಕಲಹಗಳು ಯಥೇಚ್ಛವಾಗಿ ಕಂಡುಬರುತ್ತವೆ. ಜುಂಜಪ್ಪನ ಕುಟುಂಬದ ವಂಶಾವಳಿ ಹೀಗೆಬರುತ್ತದೆ.

### ಮಾರನೋರ ಬೆಡಿಗಿನ ಕುಟುಂಬ (ಜುಂಜಪ್ಪನ ತಾತಂದಿರು)




ನಾಡಿಗೇ ದೊಡ್ಡೋರಾಗಿ ಬಾಳಿದಂತಹ ಹಿರಿಯಟ್ಟಿಗೌಡ ಸಹೋದರರಿಗೆ **(ಜುಂಜಪ್ಪನ ಅಜ್ಜಂದಿರು)** ಕಟ್ಟೇಲಿ ನೀರಿಲ್ಲ ಹೊಟ್ಟೇಲಿ ಮಕ್ಕಳಿಲ್ಲ' ಎಂಬಂತೆ ಸಂತಾನವಿರಲಿಲ್ಲ. ಹಾಗಾಗಿ ಚಿಕ್ಕೋನು ದೈಮಾರನಿಗೆ ಮದುವೆ ಮಾಡಲು ನಿರ್ಧರಿಸಿದರು. 'ತಾಯಿಸಾಲಿನ' ಯರಬಳ್ಳಿ ಹಟ್ಟಿಯ ನಾಗೇಗೌಡನ ಮನೆಗೆ ಹೆಣ್ಣುಕೇಳಲು ಹೋಗುತ್ತಾರೆ. ಹಿರಿಯಟ್ಟಿ ಗೌಡ ಮನೆತನಕ್ಕೆ ತನ್ನ ಮಗಳು ಕಂಬಕ್ಕಳನ್ನು ಮದುವೆ ಮಾಡಿಕೊಡಲು ತಾವು ತಾತ್ಪೂರ್ವಿಕವಾಗಿ ಒಪ್ಪಿಗೆ ನೀಡಿದವನಾದರೂ ಮದುವೆ ಕಾರ್ಯ ಮಾಡಲು ತಕ್ಷಣಕ್ಕೆ ಹಿಂದೇಟು ಹಾಕುತ್ತಾನೆ. ಆಗ ಹಿರಿಯಟ್ಟಿಗೌಡರು 'ನಡಿಯೋದುಬ್ಯಾಡ ನುಡಿಯೋದು ಬ್ಯಾಡ ಶಾಸ್ತ್ರ ಸಾಲಾವಳಿ ಕೇಳೋದು ಬ್ಯಾಡ ಮದುವೆಗೆ ಈಳ್ಯೇವು ಇಟ್ಟು 'ಸಾಗು' ಕೊಡು" ಎನ್ನುತ್ತಾರೆ. ಮುಂದುವರಿದು 'ಬೆಂಕಿ ಮೇಲೆ ಹಾಕೋ ಧೂಪಾ ನೀನು ತರೋದು ಬ್ಯಾಡ ನಿನ್ನ ಮಗಳ ಮದಲಿಂಗಿತ್ತಿ ಮಾಡಿಕೊಂಡು ಸೀದಾ ನಮ್ಮ ಕೊಂಕಿ ಜರಿಮಲೆಯ ಹಿರಿಯಟ್ಟಿಗೆ ಬಾ" ಎಂದು ಅಪ್ಪಣೆ ಕೊಟ್ಟು ಹಿಂತಿರುಗುತ್ತಾರೆ. ಊರು ಕೇರಿಗೆ ಬಾರದೆ ವರುಷಗಟ್ಟಲೇ ಕೀಕಾರಣ್ಯದಲ್ಲಿ ಕುಟುಂಬದ ದನಗಳನ್ನು ಕಾದುಕೊಂಡಿದ್ದ ಸೋದರ ದೈಮಾರನನ್ನು ಹುಡುಕಿತಂದು ಅವನ ಅಭಿಪ್ರಾಯ ತಿಳಿದು ಹೆಣ್ಣುಹುಡುಕಲು ಪ್ರಯತ್ನಿಸುವುದಿಲ್ಲ. ಏಕಾಏಕಿ ಹಿರಿಯಟ್ಟಿಗೌಡರು ಹೆಣ್ಣು ಕೇಳಲು ಹೋಗುವುದು ಎಷ್ಟರಮಟ್ಟಿಗೆ ಸರಿ? ಎಂಬ ಪ್ರಶ್ನೆಇಲ್ಲಿ ಏಳುತ್ತದೆ. ಆತುರ ಆತುರ ನಿರ್ಧಾರದ ಹಿಂದಿನ ನಡಾವಳಿಕೆಯ ಸ್ವರೂಪ ಏನಿದ್ದರಬಹುದು? ಮುಂತಾದ ಪ್ರಶ್ನೆಗಳು ಧುತ್ತನೆ ಎದುರಾಗುತ್ತವೆ.

ಮದುವೆ ದಿನ ಬಂದೇ ಬಿಟ್ಟುತು. ಆದರೆ ಅಣ್ಣಂದಿರು ದೈಮಾರನ್ನು ಪತ್ತೆ ಹಚ್ಚಲು ವಿಫಲರಾಗುತ್ತಾರೆ. ಮದುವೆ ದಿನ 'ಗಂಡೆಲ್ಲಿ'? ಎಂಬ ಬೀಗರ ಪ್ರಶ್ನೆಗೆ ಗೌಡರು ಕೊಡುವ ಉತ್ತರ ಹೀಗಿದೆ–

> **"ಎಂಟು ದಿನ ಮದುವೆ ಮಾನ್ನರು ನೋಡಂಗಿಲ್ಲ ಕತ್ತಲುಕೋಣ್ಯಾಗೆ**
> **ಬಿಟ್ಟವರೆ, ಮೊದಲು ಹುತ್ತದ ಪೂಜೆ ಆಗಲಿ, ತನಿಎರೆದು ಬನ್ನಿ**
> **ಹಸಿದು ಬಂದಿದ್ದೀರಿ ಹಣೆಗೆ ಹಸೆ ಹಚ್ಚುವುದರೊಳಗೆ**
> **ದೇವರೂಟಕ್ಕೆ ತಯಾರು ಮಾಡುತ್ತೇವೆ......"**

**(ಮೀ.ಶಿ–ಕಾಗೊಬು–322)**

ಬೀಗರಿಗೆ ನಿಜಸಂಗತಿ ತಿಳಿಯುತ್ತದೆ. ವಿಧಿ ಇಲ್ಲದೆ ಗಂಡಿನ ಹೆಸರಿನಲ್ಲಿ "ಬಾಕು"ವಿಗೆ ಧಾರೆ ಎರೆದುಕೊಡುತ್ತಾರೆ. ಈ ಸಂದರ್ಭದ ಸೂಕ್ಷ್ಮತೆಯನ್ನು ಗಮನಿಸಿದಾಗ ಕುಲದ ವೃತ್ತಿ ಗಂಡಿಗೆ ವರ್ಗವಾಗಿರುವುದು ತಿಳಿದುಬರುತ್ತದೆ. ಇಲ್ಲಿನ ಕಬ್ಬಿಣ (ಬಾಕು) ಗಂಡಿನ ಸಂಕೇತವಾಗಿ ರೂಪುತಳೆದಿರುತ್ತದೆ. ಇಂದಿಗೂ ಕೆಲವು ಸಮುದಾಯಗಳಲ್ಲಿ ಮಧುಮಗ ತನ್ನ ಕೈಯಲ್ಲಿ ಬಾಕುಹಿಡಿದು ಅದಕ್ಕೊಂದು ನಿಂಬೇಹಣ್ಣು ಸಿಕ್ಕಿಸಿಕೊಂಡು ಧಾರೆ ಮಂಟಪಕ್ಕೆ ಬರುವುದು ರೂಢಿಯಲ್ಲಿದೆ.

ಕಂಬಕ್ಕ ಮದುವೆಯಾದ ನಂತರ ಹಲವು ವರ್ಷಗಳ ಕಾಲ ಏಕಾಂಗಿಯಾಗಿ ಗೌಡರಮನೆಯಲ್ಲಿ ಬಾಳುವೆ ಮಾಡುತ್ತಾಳೆ. ಆರು ಜನ ವಾರಗಿತ್ತಿಯರಿಂದ ಹತ್ತು ಹಲವು ರೀತಿಯ ಕಿರುಕುಳವನ್ನು ಅನುಭವಿಸುತ್ತಾಳೆ. ಬೆಳಗಿನಿಂದ ಸಂಜೆಯವರೆಗೆ ಜೀತದಾಳಾಗಿ ಒಬ್ಬಳೇ ಮನೆಗೆಲಸ ಮಾಡಿಕೊಂಡು ಇರುತ್ತಾಳೆ. ಗಂಡನನ್ನು ನೋಡಬೇಕೆಂಬ ಸಹಜ ಬಯಕೆಯಿಂದ ಕಂಬಕ್ಕ **'ನನ್ನ ಗಂಡ ಇರೋ ಜಾಗ ತೋರಿರಿ'** ಎಂದಾಗ ಗಂಡ ಇರೋ ಜಾಗ ತೋರಿಸಿದರೆ ಮನೆಗೆಲಸ ನಿಂತು ಹೋಗುತ್ತದೆ. ತಮ್ಮ ಹೆಂಡತಿಯರಿಗೆ ಕಷ್ಟವಾಗುತ್ತದೆ. ಎಂಬ ದುರಾಲೋಚನೆಯಲ್ಲಿ

**ನಿನಗಂಡ ಇರೋಜಾಗಕ್ಕೆ**
**ಹೋಗಾಕೆ ನಿನಕೈಲಿ ಸಾಧ್ಯವಿಲ್ಲ**
**ಹುಲಿಕರಡಿಗಳು ಸಾರಂಗ**
**ಘೋರ ಅರಣ್ಯದಲ್ಲಿ ನಿನಗಂಡ ಇರಾದು**
**ಹೋಗ ಬ್ಯಾಡ ಕಾಣಮ್ಮ**
**ಅಲ್ಲಿ ಹುಲಿಕರಡಿಗಳ ಕಾಟ**

**(ಚಲುವರಾಜು-ಜುಂ-56)**

ಎಂಬ ಜಾರಿಕೆ ಉತ್ತರ ನೀಡುತ್ತಾರೆ. ಮನೆತನದ ಕರುಳ ಮುಂದುವರಿಕೆ' ಮನೋಭಾವ ಇವರಲ್ಲಿ ನಿಜಕ್ಕೂ ಇದ್ದದ್ದೇ ಆಗಿದ್ದರೆ ಕಂಬಕ್ಕಳನ್ನು ಗಂಡನೊಂದಿಗೆ ಸಂಸಾರ ಹೊಂದಲು ಅವಕಾಶಕಲ್ಪಿಸಿಕೊಡ ಬೇಕಾದುದು ಇವರ ಧರ್ಮ. ಆದರೆ ಇವರಿಗೆ ಇದು ಬೇಕಿರಲಿಲ್ಲವೆನಿಸುತ್ತದೆ. ಕಾಡಿನ ಹುಲಿಕರಡಿಗಳಿಗಿಂತ ಮನೆಯೊಳಗಿನ ಮಾನವ ಹುಲಿಕರಡಿಗಳ ವರ್ತನೆಗಳೇ ಕಂಬಕ್ಕಳಿಗೆ ಅತಿಕ್ರೂರವಾಗಿ ಕಂಡು ಬರುತ್ತವೆ. ಹೆಣ್ಣಿನ ಸ್ವಾತಂತ್ರ್ಯವನ್ನು ಕಳೆಯುವ, ಅದನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳುವ ಒಂದು ವ್ಯವಸ್ಥೆಯಾಗಿ ಹಿರಿಯಟ್ಟಿಗೌಡರು ಕಂಡು ಬರುತ್ತಾರೆ.

ಕಂಬಕ್ಕ ದೃಢನಿರ್ಧಾರಮಾಡಿ ಗಂಡನನ್ನು ಹುಡುಕಲು ಕಾಡಿಗೆ ಹೊರಡುತ್ತಾಳೆ. ಕಾಡುಗೊಲ್ಲರಿಗೆ ಕಾಡು ಯಾವತ್ತು ಅಪ್ಯಾಯಮಾನ. ಸಂಕಷ್ಟದಲ್ಲಿ ಸ್ವರ್ಗವನ್ನು ಕಾಣುವ ತುಡಿತ. ಕಂಬಕ್ಕ ತನ್ನ ಗಂಡನನ್ನು ಹುಡುಕುತ್ತಾ ಕಾಡಿನೊಂದಿಗೇ ಸಂಭಾಷಿಸುವ ಪರಿ ಹೀಗಿದೆ-

ಕಾರೆಯ ಗಿಡಗಳಿರಾ
ಕವುಳಿಯ ಗಿಡಗಳಿರಾ
ನಮಸ್ವಾಮಿ ಮಾರ ಮುತ್ತಣನ
ದನಗಳ ರೊಪ್ಪ ಎಲ್ಯೆತೆ ಹೇಳಿರಯ್ಯ
ಈಸಲ ಗಿಡಗಳಿರೋ
ಆಸಲು ಗಿಡಗಳಿರೋ
ನಮಸ್ವಾಮಿ ದನಗಳರೊಪ್ಪ
ಎಲ್ಯೆತೆ ಹೇಳಿರೋ
ಬನ್ನೀಯ ಗಿಡಗಳಿರೋ
ಹೊನ್ನೀಯ ಗಿಡಗಳಿರೋ
ತಂಗಡೀಯ ಗಿಡಗಳಿರೋ
ನಮಸ್ವಾಮಿ ದನಗಳ
ರೊಪ್ಪ ಎಲ್ಲೈತೆ ಹೇಳಿರಯ್ಯ

(ಚಲುವರಾಜು-ಜುಂ-56)

ಕಂಬಕ್ಕಳ ಹುಡುಕಾಟದ ಪರಿ 12ನೇ ಶತಮಾನದ ಅಕ್ಕಮಹಾದೇವಿಯನ್ನು ನೆನಪಿಗೆ ತರುತ್ತದೆ. ಕಾಡಿನಲ್ಲಿ ತನ್ನ ಗಂಡ ದೈಮಾರನನ್ನು ಕಂಬಕ್ಕ ಭೇಟಿ ಆಗುತ್ತಾಳೆ. ದೈಮಾರ, ತನ್ನ ಅಣ್ಣಂದಿರು, ಅತ್ತಿಗೆಯರು ಕೊಟ್ಟಂತ ಕಿರುಕುಳವನ್ನು ಕಂಬಕ್ಕಳಿಂದ ತಿಳಿದು ಜಿಗುಪ್ಸೆಗೊಳ್ಳುತ್ತಾನೆ.

"ನಮ್ಮಪ್ಪಗಳು ಸಂಪಾದಿಸಿದ
ವಜ್ರವೈಢೂರ್ಯವು ನನಗೆ ಬೇಡ
ನಮ್ಮಪ್ಪಗಳು ಕೊಟ್ಟ ಈ ದನಗಳೂ ಬೇಡ
ನಮ್ಮಣ್ಣಗಳೇ ಹೊಡಕಂಡು ಹೋಗಿಬದುಕಲಿ"

(ಚಲುವರಾಜು-ಜುಂ-62)

ಎಂಬ ತೀರ್ಮಾನಕ್ಕೆ ಬಂದು ತನ್ನ ಒಡನಾಡಿ ದನಗಳನ್ನೆಲ್ಲ ಒಟ್ಟು ಸೇರಿಸಿ ಅವುಗಳಿಗೆ ತಿಳಿಹೇಳಿ ನಮಿಸಿ ಹಿರಿಯಟ್ಟಿ ದಾರಿ ತೋರಿಸಿ ಕಂಬಕ್ಕಳೊಂದಿಗೆ ಕಾಡುಬಿಟ್ಟು ಕುರುಬರ ನೆರವಿನಿಂದ ಊರು ಸೇರುತ್ತಾನೆ.

ಊರು ಸೇರಿದ್ದ ದೈಮಾರ-ಕಂಬಕ್ಕ ಮತ್ತೆ ಕಾಡಿಗೆ ಹಿಂತಿರುಗುತ್ತಾರೆ. ಕಂಪಿಲೆ ಮಲೆಗೊಂಡನಿಗೆ ಜನ್ಮವಿತ್ತು ಮರಣವಪ್ಪುತ್ತಾರೆ. ಅನಾಥ ಶಿಶು ಮಲೆಗೊಂಡ, ಗೌರಸಂದ್ರ ಮಾರಿಯ ಸಹಾಯದಿಂದ ಮತ್ತೆ ಮರಳಿ ಹಿರಿಯಟ್ಟಿಗೂಡು ಸೇರುತ್ತದೆ. ಮಲೆಗೊಂಡನ ಅದೃಷ್ಟದ ದೆಸೆಯಿಂದ ಹಿರಿಯಟ್ಟಿ ಗೌಡರಿಗೆ ಮುಪ್ಪಿನಲ್ಲಿ ಮಕ್ಕಳಾಗುತ್ತವೆ. ಮಕ್ಕಳ ವ್ಯಾಮೋಹ ಮಲೆಗೊಂಡನ ಮೇಲಿನ ಪ್ರೀತಿ ಕ್ಷೀಣಿಸುತ್ತದೆ. ಮಲೆಗೊಂಡ ತಮ್ಮ ಕುಟುಂಬದ ಕುಡಿಯೆಂದು ಗೌಡರಿಗೆ ಗೊತ್ತಾದ ಕೂಡಲೇ ಅವನನ್ನು ಮನೆಯಿಂದ ಹೊರಹಾಕಲು ಯತ್ನಿಸುತ್ತಾರೆ.

**"ನಾಕುವರ್ಷದಾ ಹುಡುಗಾ ಆಯಿತು ಮಗುವಣ್ಣಾ**
**ಆವಾಗ ಅವರೇಣತೇರು ಏನು ಹೇಳಿ ಕೊಡುತಾರಣ್ಣ**
**ಆ ಹುಡುಗ ಒಬ್ಬನೇ ಒಬ್ಬ ತಂದೆಗೆ ಮಗ ಅವನು**
**ಅವನಿಲ್ಲೆ ಇದ್ದರೆ ನೀವೊಂದುಂಡೆಭಾಗ ಕೊಡಬೇಕಾಗುತ್ತೈತೆ**
**ನೀವಾರು ಜನಾನು ಒಂದು ಭಾಗ ಮಾಡಿಕಾ ಬೇಕಾಗುತ್ತೈತೆ**
**ಅನನೊಬ್ಬನಿಗೇ ಒಂದು ಭಾಗ**
**ಅವನ ಎಲ್ಲಾದರು ತಪ್ಪಿಸಾಕಿ ಬಿಡಿರಿ ......................."**

**(ಚಲುವರಾಜು-ಜುಂ-83)**

**"ಅಜ್ಜನ ಆಸ್ತಿ ಮೊಮ್ಮಕ್ಕಳಿಗೆ"** ಎಂಬ ರೂಢಿಮಾತಿದೆ. ಮಲೆಗೊಂಡನ ತಂದೆ ದ್ಯೆಮಾರನ ಭಾಗದ ಆಸ್ತಿಭಾಗವೆಲ್ಲ ಮಲೆಗೊಂಡನಿಗೇ ದಕ್ಕಬೇಕು. ಇದು ಸಹಜವಾಗಿ ದೊಡ್ಡಪ್ಪಗಳಿಗೆ ಹೊಟ್ಟೆ ಉರಿಯಲು ಕಾರಣವಾಯ್ತು. ಆಸ್ತಿ ಮೇಲಿನ ಅತಿಯಾಸೆ ಮಲೆಗೊಂಡನನ್ನು ಅನಾಥನನ್ನಾಗಿಸಿ ಮನೆಯಿಂದ ಹೊರಹಾಕುವ ದುಷ್ಕೃತ್ಯಕ್ಕೆ ಹಿರಿಯಟ್ಟಿಗೌಡರು ಕೈ ಹಾಕುತ್ತಾರೆ.

## 5.3 ಪ್ರಾಣಿಗಳೊಂದಿಗೆ ಹೋರಾಟ

ಗೊಲ್ಲದನಗಾಹಿಗಳು ಹುಲ್ಲುನೀರಿಗಾಗಿ ವಲಸೆಹೋದ ಸಂದರ್ಭದಲ್ಲಿ ಅಡವಿಗಳ ಮಧ್ಯೆ ತಿಂಗಳುಗಟ್ಟಲೆ ಒಂಟಿಯಾಗಿ ಜೀವನ ಮಾಡಬೇಕಾಗಿ ಬರುತ್ತಿತ್ತು. ಅಂಥಕಡೆ ಕಾಡುಪ್ರಾಣಿಗಳ ಹಾವಳಿ ಸಾಮಾನ್ಯವಾಗಿರುತ್ತಿತ್ತು. ರಾತ್ರಿಯೆಲ್ಲಾ ಬೆಂಕಿ ಹಾಕಿಕೊಂಡು ತಮ್ಮ ದನಗಳನ್ನು ರಕ್ಷಿಸಿಕೊಳ್ಳಬೇಕಾದ ಅನಿವಾರ್ಯತೆ ಇತ್ತು. ಇವರೆಲ್ಲರ ಕಟ್ಟೆಚ್ಚರಗಳನ್ನು ಮೀರಿ ಕಾಡಿನ ಕ್ರೂರ ಪ್ರಾಣಿಗಳು ದಾಳಿ ಇಡುತ್ತಿದ್ದವು.

ಈರಗಾರರಾದ **ಹುಲಿಮದ್ದಣ್ಣ, ಹುಲಿಬಿಲ್ಲಪ್ಪ, ಬೆಟ್ಟದ ಈರಪ್ಪ** ಇವರು ತಮ್ಮ ದನಗಳನ್ನು ಹುಲಿಯ ಬಾಯಿ ಯಿಂದ ತಪ್ಪಿಸಲು ನೇರ ಹೋರಾಟಕ್ಕಿಳಿದು, ಹುಲಿಯನ್ನು ಕೊಂದು ತಾವೂ ಹತರಾದವರು. **'ಈರಗಾರ'**ರಾಗಿ ಸಮುದಾಯದಿಂದ ಪೂಜಿಸಿಕೊಂಡವರು. ಹಾಗೂ ಕಾವ್ಯ ಕಥನಗಳಿಗೆ ಪ್ರೇರಕರಾದವರಾಗಿದ್ದಾರೆ. ಪ್ರಾಣಿಗಳಿಂದ ಹತರಾದ ಈರಗಾರರಲ್ಲಿ **'ಸಿರಿಯಣ್ಣ'** ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದಾನೆ. ಜನಪ್ರಚಲಿತನಾಗಿಯೂ ಪ್ರಸಿದ್ಧಿ ಪಡಿದಿದ್ದಾನೆ.

ಮಾರನೋರ ಬೆಡಗಿಗೆ ಸೇರಿದ ಸಿರಿಯಣ್ಣ, ದನಕಾಯುವ ಕಾಯಕದವನಾದರೂ ಅವನಿಗೆ ಯುದ್ಧವೆಂದರೆ ಬಲುಪ್ರೀತಿ. **'ಎಣ್ಣುಂಡ ಎಣೆಗಂಟು ಮಣ್ಣಾಗ ಎಳೆವೂತ ಚಿನ್ನದ ತುರಾಯಿ ತಿರುವೂತ'** ನಿಡಗಲ್ಲು ಸೀಮೆಯ ಯುದ್ಧದಲ್ಲಿ ಭಾಗವಹಿಸಿ ಪರಾಕ್ರಮತೋರಿ ಹಿಂತಿರುಗಿಬಂದ. ಕೋಟೆಕೆರೆ ಬಳಿ ಆವಿನ ಗೂಡು ತಿರುವಿಕೊಂಡಿದ್ದ. ಆಗ ಅನಿರೀಕ್ಷಿತವಾಗಿ ಬಲಾಢ್ಯ ಹಂದಿಗಳು ಅವನ ಮೇಲೆ ಆಕ್ರಮಣ ಮಾಡುತ್ತವೆ.

**ಕೆಂದೂಳೂ ಕೆದರೂತ ಮುಂಬಾಲ ಬೀಸೂತ**
**ಬಂದಾವೆ ಕಾಡಂದಿ ಎದುರೀಗೆ ಈರಣ್ಣಾ ಕೂಟೆ**
**ಬಂದು ಮಾಡ್ಯಾವೆ ಕದನಾವೆ**

**(ಹನೂರು-ಸಿಬೆ-59)**

ಎರಗಿದ ಹಂದಿಗಳನ್ನು ಸಿರಿಯಣ್ಣ ಒಂದೊಂದಾಗಿ ಸದೆಬಡಿಯುತ್ತಾನೆ. ಹಂದಿಗಳೊಂದಿಗೆ ಸೆಣೆಸಾಡುವ ಪ್ರತೀ ಹಂತವೂ ಕಾವ್ಯದಲ್ಲಿ ಮೈನವಿರೇಳುವಂತೆ ಚಿತ್ರಿತವಾಗಿದೆ.

**"ಅನ್ನೆರಡು ಸಾವಿರ ಅಂದಿಯ ಇಂಡೀಗೆ**
**ಗುಂಡು ಬೀಸೀ ಕೊಂದಾನೆ ಸಿರಿಯಣ್ಣ**
**ಉತ್ತದ ಮೇಲೆ ಅಂದಿತಲೆಯ ವಡೆದಾನೆ"**

ಆದಾಗ್ಯೂ 'ಮಾರನೋರ ದೇಸಪತಿ' ಸಿರಿಯಣ್ಣ ಕಾದಾಡಿ ಕಾದಾಡಿ ದಣಿದು ಹಂದಿಗಳಿಗೆ ಮಣಿಯುತ್ತಾನೆ.

**"ದೊಡ್ಡ ದೊಡ್ಡ ಅಂದಿ ದೊಡ್ಡ ದೊಡ್ಡ ಕ್ವಾರೆಅಂದಿ**
**ದೊಡ್ಡದಾದಂದಿ ಚಲುವಂದಿ ಈರಣ್ಣನ**
**ದೊಡ್ಡೇನ ಬಲವ ಮುರಿದಾವು"**

ಕೊನೆಗೆ ಧೀರ ಸಿರಿಯಣ್ಣ ಹಂದಿಗಳಿಂದ ಹತನಾಗುತ್ತಾನೆ.

**"ಮಡಿದನಲ್ಲೇ ಈರ ಮಡಿದನಲ್ಲೇ ಸೂರ**
**ಮಡಿದ ಮಾರನೋರ ಮಗನೀರ ಸಿರಿಯಣ್ಣ**
**ಮಡಿದು ಕೀರುತಿಯಾ ಪಡೆದಾನ"**

**(ಹನೂರು-ಸಿಬೆ-61)**

ಸಿರಿಯಣ್ಣನ ಪರಾಕ್ರಮವನ್ನು ಮೆಚ್ಚಿ ಊರಿನ ಜನ ಅವನ ಹೆಸರಿನಲ್ಲಿ ಅಲಗು ಹೊಯಿಸಿ ಪೂಜಿಸಲು ಆರಂಭಿಸಿದರು. ಮುಂದೆ ಹಂದಿಸಿರಿಯಣ್ಣನೆಂದೇ ಖ್ಯಾತನಾಗುತ್ತಾನೆ. ನಾಡೋಜ ಸಿರಿಯಜ್ಜಿಯ ಯಲಗಟ್ಟೆ ಗೊಲ್ಲರಹಟ್ಟಿಯ ಮುಖ್ಯದೇವರೂ ಸಿರಿಯಣ್ಣನಾಗಿರುತ್ತಾನೆ. ಅಲ್ಲಿರುವ ಎಲ್ಲರೂ ಸಿರಿಯಣ್ಣನ ಹೆಸರನ್ನು ವ್ಯಕ್ತಿ ಹೆಸರಾಗಿ ಬಳಸಿಕೊಳ್ಳುತ್ತಿರು ವುದು ಇಂದಿಗೂ ವಾಡಿಕೆಯಲ್ಲಿದೆ. ಕಾಡಿನೊಂದಿಗೆ ತಮ್ಮ ಬದುಕನ್ನು ಕಟ್ಟಿಕೊಳ್ಳಬೇಕಾದ ಅನಿವಾರ್ಯತೆ ಇರುವ ಈ ಗೋವಳರು ಕಾಡು ಪ್ರಾಣಿಗಳ ರೌದ್ರದಾಟವನ್ನು ಭೀಕರ ಸನ್ನಿವೇಶಗಳೊಂದಿಗೆ ನಿತ್ಯವೂ ಸೆಣಸಾಡಬೇಕಾದ ಪರಿಸ್ಥಿತಿಗಳು ಎದುರಾಗುತ್ತಲೇ ಇರುತ್ತಿದ್ದವು.

ಚಿತ್ರದೇವರ ಕಾವ್ಯದಲ್ಲಿ ಪ್ರಾಣಿಗಳೊಂದಿಗೆ ಸೆಣೆಸಾಡುವ ಎರಡು ಸಂದರ್ಭಗಳು ಬರುತ್ತವೆ. ಚಿತ್ತಯ್ಯ ತಿರುಗುಣಿ ಪಟ್ಟಣವನ್ನು ಗೆದ್ದು ಮುತ್ತಿನ ಗೊಡಗಿನೊಂದಿಗೆ ಕತ್ತಲೆ ಕರಿಮಲೆಯಲ್ಲಿ ಚಿತ್ರಗಿರಿಗೆ ಹಿಂತಿರುಗಿ ಬರುವಾಗ ದಾರಿಮಧ್ಯದಲ್ಲಿ **'ಮಂಡಾದ್ರಿ'** ಕಪ್ಪೆಯೊಂದು ಎದುರಾಗಿ ಚಿತ್ತಯ್ಯನ ಜಂಘಾಬಲವನ್ನೇ ಕುಗ್ಗಿಸುತ್ತದೆ.

**"ಕಿಡಿಗಣ್ಣನು ಚಿತ್ತಯ್ಯನ ಜುಟ್ಟಿಡಿದುಕೊಂಡು**
**ಮೇಲುಚ್ಚೆಹೊಯ್ದದಲ್ಲೋ ನೋಡಣ್ಣಾ**
**ಚಿತ್ತಯ್ಯನ ಮುಖತುಂಬಾ ಉಗಳಾದಂತೋ"**

**(ಚಿ.ಎ.-ಚಿಕಾ-54)**

ಜಪದ ಮುನಿ ಕಾಟಣ್ಣನ ಸಂಯಮದ ನೀತಿಯುಕ್ತ ಸಂಧಾನದ ಮಾತುಗಳಿಂದ ಪರಿಸ್ಥಿತಿ ತಿಳಿಗೊಳ್ಳುತ್ತದೆ. ಎದುರಾದ ಮಂಡಾದ್ರಿ ದಾರಿಬಿಟ್ಟು ಕೊಡುತ್ತದೆ.

ಎರಡನೇ ಹಂತದಲ್ಲಿ **ಮೊಲವೊಂದು** ಅಡ್ಡಬಂದು ಚಿತ್ತಯ್ಯನ ದಂಡನ್ನೆಲ್ಲ ನಾಶಮಾಡುತ್ತದೆ.

**"ಮೂರು ಎಕರೆ ನೀರು ಮೂಸಿ ನೋಡಿಕೊಂಡು ಕುಡಿತೈತೋ**
**ಆರು ಖಂಡುಗದಗದ್ದೆ ಆರಿಸಿ ಮೇಯುತ್ತೈತೋ**
**ಅಂಚಿಹುಲ್ಲಾ ಮೇಯುತ್ತೆ ಬೆಂಚೆನೀರು ಕುಡಿಯುತ್ತೆ**
**ಸಾಣೆಯ ಕಲ್ಲಮೇಲೆ ಮೀಸೆಯ ಮಸೆಯುತ್ತೈತೆ"**

**(ಚಿಎ-ಚಿಕಾ-55)**

ಮೊಲದ ಅದಮ್ಯ ಶಕ್ತಿಯನ್ನು ಕಂಡ ಕಾಟಣ್ಣ ಅರಮನೆಗೆ ಸುದ್ದಿ ಮುಟ್ಟಿಸುತ್ತಾನೆ. ಅರಮನೆಯಲ್ಲಿದ್ದ **'ಮೂಳನಾಯಿ'** ಮತ್ತು ಗಿಡುಗ ಇವುಗಳನ್ನು ಕಳುಹಿಸುವಂತೆ ಗಂಗಿಮಾಳಮ್ಮಗೆ ತಿಳಿಸುತ್ತಾನೆ. ಕಾಟಣ್ಣನ ಅಣತಿಯಂತೆ ಮೂಳ ಮತ್ತು ಗಿಡುಗ ಕುರುಬರ ಮನೆಹಾಲು ಕುಡಿದು, ಕುಂಬಾರ ಮನೆಯ ಕುಡಿಕೆಯಲ್ಲಿ ಉಂಡು, ಅಬೆಗುಂಡಿಯಲ್ಲಿ ಮಲಗೆದ್ದು, ಅಗಸರ ಮನೆಯಲ್ಲಿ ಮೈವರೆಸಿಕೊಂಡು ಚಿತ್ತಯ್ಯನ ನೆರವಿಗೆ ಬರುತ್ತವೆ. ಉನ್ಮತ್ತ ಮೊಲವನ್ನು ಕೊಂದು ಹಾಕಿ ಕಾಟಣ್ಣನಿಗೆ ನಮಸ್ಕರಿಸುತ್ತವೆ. ಇದನ್ನು ಕಂಡ ಚಿತ್ತಯ್ಯ ವಿವೇಕ ಕಳೆದುಕೊಂಡು ಸಹಾಯ ಮಾಡಿದ ನಾಯಿಯನ್ನು ರಕ್ತ ಕಾರುವಂತೆ ಹೊಡೆದುಹಾಕುತ್ತಾನೆ. ಚಿತ್ತಯ್ಯನ **'ಪೂರ್ವಗ್ರಹವರ್ತನೆ'** ಹಲವು ರೀತಿಯ ಜಿಜ್ಞಾಸೆಗೆ ಎಡೆಮಾಡಿಕೊಡುತ್ತದೆ.

1. ಒಬ್ಬ ಹೆಂಗಸಿನ **(ಹೆಂಡತಿಯಾದರೂ)** ನಾಯಿಯಿಂದ ತಾನು ಬದುಕಬೇಕಾಗಿ ಬಂದಿದ್ದರಿಂದ ನಾಯಿಯ ಮೇಲೆ ಚಿತ್ತಯ್ಯನಿಗೆ ಕೋಪ ಬಂದಿರಬೇಕು.

2. ತನ್ನ ಹೆಂಡತಿಯ ನಾಯಿ, ಗಿಡುಗ ತನಗೆ ನಮಸ್ಕರಿಸದೆ ಕಾಟಣ್ಣನಿಗೆ ನಮಸ್ಕರಿಸಿದ್ದೂ ಸಹ ಚಿತ್ತಯ್ಯನಿಗೆ **'ಒಣಪ್ರತಿಷ್ಠೆ'** ಎದುರಾಗಿರಬೇಕು.

3. ಗಂಗಿಮಾಳಮ್ಮ ಮೊಲವನ್ನು ಹೊಡೆದು ಹಾಕಿ ಕಾಟಣ್ಣನಿಗೆ ಮಾತ್ರ ನಮಸ್ಕರಿಸಿ ಬರುವಂತೆ ಸೂಚಿಸಿದ್ದರ ಔಚಿತ್ಯವೇನು? ಎಂಬ ಪ್ರಶ್ನೆ ಎದುರಾಗುತ್ತದೆ.

ಭೌತಿಕವಾಗಿ ಬಲಹೀನರೆಂದು ಪರಿಭಾವಿಸುವವರೂ ಕೆಲಸಂದರ್ಭದಲ್ಲಿ ಬಲಾಢ್ಯರಾಗಬಹುದಾದ ಸಾಧ್ಯತೆಗಳಿವೆ. ಬಲಾಢ್ಯರೂ ಬಲಹೀನರಾಗುವ ಪರಿಸ್ಥಿತಿಗಳು ಎದುರಾಗುತ್ತವೆ. ಮಂಡಾದ್ರಿ ಮತ್ತು ಮೊಲ ಚಿತ್ತಯ್ಯನನ್ನು ಎಡತಾಕುವ ಸಂದರ್ಭಗಳು ಈ ಮಾತುಗಳನ್ನು ಮತ್ತಷ್ಟು ಗಟ್ಟಿಗೊಳಿಸುತ್ತವೆ.